ಗಂಭೀರವಾಗಿ ಗಮನಿಸಿದ್ದೇನೆ. ಯಾರಿಗೂ ಕೂಡ ತಾರತಮ್ಯ ಆಗಬಾರದೆಂಬ ಬಗ್ಗೆ ಎರಡು ಮಾತಿಲ್ಲ ಎಂಬ ಬಗ್ಗೆ ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಾನು ಏನು ಹೇಳಿದ್ದೇನೆಂದರೆ, ಈಗ 3411 ಕಿ.ಮೀ.ರಸ್ತೆಗಳು ಏನಿವೆ, ಆ ರಸ್ತೆಗಳನ್ನು ಹೊರತುಪಡಿಸಿ ಬೇರೆ ಯಾವುದನ್ನು ನಾವು ಮಾಡಿಲ್ಲ. (ಗೊಂದಲ) ಎರಡನೇ ಸಲ ತೆಗೆದುಕೊಳ್ಳುವಂಥ ಸಂದರ್ಭದಲ್ಲಿ ಆ ರಸ್ತೆಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಅವರು ವಾಗಝರಿ ಮತ್ತು ರಿಬ್ಬನ್‌ಪಲ್ಲಿ ರಸ್ತೆಯ ಬಗ್ಗೆ ಹೇಳಿದರು. ಅದಕ್ಕೆ ಇವತ್ತೇ DCF ನಲ್ಲಿ ಕೊನೆಯ ದಿವಸ ಇದೆ. ಮೂರು ರಸ್ತೆಗಳನ್ನು ತೆಗೆದುಕೊಂಡಿರುವುದರಲ್ಲಿ ಇದೊಂದು ರಸ್ತೆ ಇದೆ. ಟೆಂಡರ್ ಹಾಕುವುದಕ್ಕೆ ಇವತ್ತೇ 27ನೇ ತಾರೀಖು ಕೊನೆಯ ದಿವಸ ಇತ್ತು. ಇದು ಫೈನಲ್ ಇದ್ದು, ಇದರಲ್ಲಿ ನಾಲ್ಕಾರು ಜನ ಭಾಗಿಯಾಲಿಕ್ಕೆ ಬಂದಿದ್ದಾರೆ. ಈ ವಾಗ್‌ಝರಿ – ರಿಬ್ಬನ್‌ಪಲ್ಲಿ ರಸ್ತೆ ಆಗುತ್ತದೆಂದು ತಮ್ಮೆದುರಿಗೆ ಹೇಳುವುದಕ್ಕೆ ನಾನು ಬಯಸುತ್ತೇನೆ. ವಾಡಿ–ರಾಯಚುರು ರಸ್ತೆ ಈಗ ಮುಗಿದಿದೆ. ಆದರೆ ಗುಲ್ಬರ್ಗಾ–ವಾಡಿ ರಸ್ತೆ ಇನ್ನು ಕೆಲವೇ ದಿವಸಗಳಲ್ಲಿ ತೆಗೆದುಕೊಳ್ಳುವ ಕೆಲಸ ಮಾಡುತ್ತೇವೆ ಎನ್ನುವಂಥದ್ದನ್ನು ಹೇಳುವುದಕ್ಕೆ ನಾನು ಬಯಸುತ್ತೇನೆ. 3411 ಕಿ.ಮೀ. ರಸ್ತೆ ಏನಿದೆ, ನಾವು ಮೊದಲು ಐಡೆಂಡಿಟಿಫೈ ಮಾಡಿರುವಂಥ ರಸ್ತೆಗಳನ್ನು, ಆ ರಸ್ತೆಗಳನ್ನು ಹೊರತುಪಡಿಸಿ ನಾವು ಯಾವುದನ್ನೂ ತೆಗೆದುಕೊಂಡಿಲ್ಲ.

ಉಪಾಧ್ಯಕ್ಷರು :– ಮಾನ್ಯ ಸಚಿವರು ಉತ್ತರವನ್ನು ಹೇಳಲಿ, ಯಾರು ವೆಲ್‌ನಲ್ಲಿ ಇರುವವರು ಮಾತನಾಡಬೇಡಿ.

(ಗೊಂದಲ)

ಶ್ರೀ ಸಿ.ಎಂ.ಉದಾಸಿ :– ಮೇ ತಿಂಗಳೊಳಗೆ ಆದ್ಯತೆಯ ಮೇಲೆ ರಸ್ತೆಗಳನ್ನು ತೆಗೆದುಕೊಳ್ಳುತ್ತೇವೆಂದು ಅತ್ಯಂತ ಗೌರವದಿಂದ ಹೇಳುವುದಕ್ಕೆ ಬಯಸುತ್ತೇನೆ. ತಾವು ಸಹಕಾರ ಮಾಡುತ್ತೀರೆಂದು ವಿನಂತಿಸಿಕೊಳ್ಳುತ್ತೇನೆ....

(ಗೊಂದಲ)

ಉಪಾಧ್ಯಕ್ಷರು :– ಪ್ರಶ್ನೋತ್ತರ ಅವಧಿಯನ್ನು ಈಗ ಮುಕ್ತಾಯ ಮಾಡಿದ್ದೇನೆ. ಈಗ ಮುಂದಿನ ವಿಷಯಕ್ಕೆ ಹೋಗುತ್ತಿದ್ದೇನೆ. ದಯವಿಟ್ಟು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸುವುದು.

(ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಸ್.ಸುರೇಶ್ ಕುಮಾರ್(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಉಪಾಧ್ಯಕ್ಷರೆ, ಇಂದಿನ 5ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 66 ಪ್ರಶ್ನೆಗಳ ಪೈಕಿ 63 ಪ್ರಶ್ನೆಗಳಿಗೆ ಉತ್ತರಗಳನ್ನು ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು :– ಮಂಡಿಸಲಾಯಿತು.

ಅನುಬಂಧ–8

ಶ್ರೀ ಎಸ್.ಸುರೇಶ್ ಕುಮಾರ್(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ದಿನಾಂಕ: 27.2.2009 ರಂದು ಕರ್ನಾಟಕ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಚುನಾವಣೆಯ ಪ್ರಸ್ತಾಪವನ್ನು ಮಂಡಿಸಲಾಗಿರುತ್ತದೆ. ಕರ್ನಾಟಕ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ 3 ವಿಧಾನಸಭಾ ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ನೀಡಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು :– ಪ್ರಸ್ತಾಪ ಅಂಗೀಕರಿಸಲಾಯಿತು. ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಸಹಕಾರ ನೀಡಿ, ನಾನು ಎಲ್ಲರಲ್ಲಿ ವಿನಂತಿಯನ್ನು ಮಾಡುತ್ತೇನೆ, ಸದನವನ್ನು ನಡೆಸೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ವಿರೋಧ ಪಕ್ಷದ ನಾಯಕರು):– ಮಾನ್ಯ ಉಪಾಧ್ಯಕ್ಷರೆ, ತಮಗೆ ಗೊತ್ತಿದೆ, World Bankದಾಗಲೀ ಅಥವಾ ಬೇರೆ ಯಾವುದೇ ವಿಚಾರದಲ್ಲಿ 5 ಕೋಟಿ ರೂ.ಗಳಿಂತ ಹೆಚ್ಚಿನ ಬೇರೆ ಯಾವುದೇ ಯೋಜನೆಗಳು ಇದ್ದರೆ ಅದನ್ನು ನೀವು ಬದಲಾವಣೆ ಮಾಡಬೇಕಾಗಲಿ, ಆ ಪ್ರಸ್ತಾವನೆಯನ್ನು ಒಪ್ಪಬೇಕಾದರೆ ನಿಮ್ಮ Business Transaction Rules ಪ್ರಕಾರ ಇದನ್ನು cabinet ನಲ್ಲಿ ಇಟ್ಟು ನೀವು ಬದಲಾವಣೆ ಮಾಡಬೇಕು. ಅದನ್ನು ಬದಲಾವಣೆ ಮಾಡಿದ್ದೀರೋ ಹೇಗೆ? ಮಾಡಿದ್ದರೆ ಯಾವ ಕ್ಯಾಬಿನೆಟ್‌ನಲಿ ಯಾವ ದಿನಾಂಕದಂದು ಮಾಡಿದ್ದೀರಿ. ಮಾಡದೇ ಇದ್ದರೆ ಇದಕ್ಕೆ ಕಾರಣವೇನು? ಇವತ್ತು ನೀವು ಸ್ವಲ್ಪ ಜ್ಯೋಶ್‌ನಲ್ಲಿದ್ದೀರಿ. ಒಂದು ಸಾರಿ ಸಿಕ್ಕಿಬಿದ್ದರೆ ಯಾರೇ ಇರಬಹುದು ಹೊರಗೆ ಬರುವುದಕ್ಕಾಗುವುದಿಲ್ಲ. ನಾವು Business Transaction Rules ಒಳಗಡೆ ಕೆಲಸ ಮಾಡದೆ ಹೋದರೆ, ಇವತ್ತಲ್ಲ ನಾಳೆ ಸಿಕ್ಕಿ ಬೀಳುತ್ತೀರಿ. ದಯವಿಟ್ಟು ಇದನ್ನು World Bank ಒಪ್ಪಿದೆಯೋ ಹೇಗೆ? ಅಥವಾ World Bankಗೆ ನೀವು ಒಪ್ಪಿಸಬೇಕಾದರೆ cabinet decision ತೆಗೆದುಕೊಂಡಿದ್ದೀರೋ ಹೇಗೆ? ಮಾಡಿದ್ದರೆ ಎಂದು ಮಾಡಿರುತ್ತೀರಿ, ಯಾವ ದಿನಾಂಕಕ್ಕೆ ಮಾಡಿರುತ್ತೀರಿ ಅದನ್ನು ಹೇಳಬೇಕು.

ಉಪಾಧ್ಯಕ್ಷರು :– ನಾನು ಪ್ರಶ್ನೋತ್ತರವನ್ನು ಮುಕ್ತಾಯ ಮಾಡಿದ್ದೇನೆ. ಉದಾಸಿಯವರೆ ಉತ್ತರವನ್ನು ಹೇಳಿ.

ಶ್ರೀ ಸಿ.ಎಂ.ಉದಾಸಿ :– ನನಗೆ ಅಧಿಕಾರಿಗಳಿಂದ ಬಂದ ಮಾಹಿತಿಯ ಪ್ರಕಾರ World Bank ನ ಯಾವುದೇ workಗಳಿಗೆ ಸಹಿತ amount ಪ್ರಶ್ನೆ ಬಂದಾಗ cabinet ಗೆ ಇದು ಬರಬೇಕಾದ ಅವಶ್ಯಕತೆ ಇಲ್ಲವೆಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಆದ್ದರಿಂದ ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಉಪಾಧ್ಯಕ್ಷರೆ, ಕೆ–ಶಿಫ್ ಎನ್ನುವಂಥದ್ದು it is an agreement between the Government of

Karnataka and the World Bank. ಒಂದು technical feasibility reportನ್ನು independent agency ಯಿಂದ ಮಾಡಿಸಿ ಆ programme ನ್ನು approve ಮಾಡಿರುವಂಥದ್ದು ಅದನ್ನು ಬದಲಾವಣೆ ಮಾಡಬೇಕಾದರೆ cabinetನಲ್ಲಿ approve ಆಗುವುದರ ಜೊತೆಗೆ World Bank ಒಪ್ಪಿದರೆ ಮಾತ್ರ ಸಾಧ್ಯ ಆಗುತ್ತದೆ. (ಗೊಂದಲ) ಇದರಲ್ಲಿ World Bank approval ಕೊಟ್ಟಿಲ್ಲವೆಂದರೆ ಏಕಾಏಕಿ ಟೆಂಡರ್‌ನ್ನು ಕರೆದಿದ್ದಾರೆಂದು ಹೇಳಿದರೆ they are flouting all the rules.

(ಗೊಂದಲ)

ಶ್ರೀ ಸಿದ್ದು ಸವದಿ :– ಕೆ–ಶಿಫ್‌ನಲ್ಲಿ ಬಹಳಷ್ಟು ಉತ್ತರ ಕರ್ನಾಟಕಕ್ಕೆ ಅನ್ಯಾಯ ಮಾಡಿದ್ದಾರೆ. ಇವರು ಆಗ ನಮಗೆ ರಸ್ತೆಗಳನ್ನು ಕೊಟ್ಟೇ ಇಲ್ಲ. (ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಒಂದು ಕೊನೆಯಾಗಬೇಕಾಗುತ್ತದೆ. World Bank ನಿಂದ ಇವರಿಗೆ ಎರಡನೆಯ ಹಂತಕ್ಕೆ ಒಂದು ರೂ.ಗಳು ಸಿಗುವುದಕ್ಕೆ ಸಾಧ್ಯವಿಲ್ಲ. (ಗೊಂದಲ)

ಶ್ರೀ ಸಿದ್ದು ಸವದಿ :– ಅದಕ್ಕಾಗಿ ನಮ್ಮ ಸರ್ಕಾರದಲ್ಲಿ ಮಾನ್ಯ ಸಚಿವರು ಸರಿಪಡಿಸುವಂಥ ಕೆಲಸವನ್ನು ಮಾಡುತ್ತಿದ್ದಾರೆ. (ಗೊಂದಲ)

ಉಪಾಧ್ಯಕ್ಷರು :– ಈ ವಿಷಯವನ್ನು ಮುಕ್ತಾಯ ಮಾಡಿರುವುದರಿಂದ ಮತ್ತೆ ಚರ್ಚೆಗೆ ಅವಕಾಶವಿಲ್ಲ. ಮುಂದಿನ ವಿಷಯಕ್ಕೆ ಹೋಗೋಣ. ಈಗ ಗಮನ ಸೆಳೆಯುವ ಸೂಚನೆ.

(ಗೊಂದಲ)

ಶ್ರೀ ಸಿದ್ದು ಸವದಿ :– ಅನ್ಯಾಯವನ್ನು ಸರಿಪಡಿಸುತ್ತಿದ್ದಾರೆ. ಅದರ ಬಗ್ಗೆ ಅವರು ಹೇಳಬೇಕಲ್ಲವೆ? ನಮಗೆ ಜನ ಓಟು ಹಾಕಿದ್ದಾರೆ, ನಮಗೂ ಕೂಡ ಹೇಳುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಬರೀ ಅವರೇ ಮಾತನಾಡಿದರೆ. ಹೇಗೆ?

ಉಪಾಧ್ಯಕ್ಷರು :– ಉತ್ತರವನ್ನು ಹೇಳಿಬಿಡಿ.

ಶ್ರೀ ಸಿದ್ದು ಸವದಿ :– ದಕ್ಷಿಣ ಕರ್ನಾಟಕಕ್ಕೆ 3500 ಕೋಟಿ ರೂಪಾಯಿಗಳನ್ನು ಕೊಟ್ಟು, ಉತ್ತರ ಕರ್ನಾಟಕಕ್ಕೆ 1500 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, ಈ ತಾರತಮ್ಯವನ್ನು ತಾವು ಸರಿಪಡಿಸಬೇಕು. ಅದರ ಬಗ್ಗೆ ತಾವು ಹೇಳಬೇಕಲ್ಲವೆ?

ಉಪಾಧ್ಯಕ್ಷರು :– ದಯಮಾಡಿ ತಾವುಗಳು ಕುಳಿತುಕೊಳ್ಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :– ಸುಮಾರು 100 ಕೋಟಿ ರೂಪಾಯಿಗಳ ಬಿಲ್ಸ್ ಲ್ಯಾಪ್ಸ್ ಆಗುತ್ತದೆ. Within one month you cannot do it.

ಶ್ರೀ ಸಿ.ಎಂ.ಉದಾಸಿ :– ನಾನು ಮಾಹಿತಿ ಹಕ್ಕುದಾರಿಕೆಯ ಇಲಾಖಾಧಿಕಾರಿಗಳಿಂದ ಮಾಹಿತಿಯನ್ನು ಪಡೆದುಕೊಂಡಿದ್ದೇನೆ. ನಾನು ನಮ್ಮ ಪ್ರಧಾನ ಕಾರ್ಯದರ್ಶಿಗಳಿಂದ ಮಾಹಿತಿಯನ್ನು ಪಡೆದುಕೊಂಡಿದ್ದೇನೆ.

ಉಪಾಧ್ಯಕ್ಷರು :– ತಾವುಗಳು ದಯಮಾಡಿ ತಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಶ್ರೀ ಸಿ.ಎಂ.ಉದಾಸಿ :– ಒಂದು ನಿಮಿಷ, ನಾನು ಮಾತನಾಡಬೇಕಾದಾಗ ನಾನು ಗೊತ್ತಿಲ್ಲದಂತಹ ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಮಾಹಿತಿಗಳನ್ನು ಪಡೆದುಕೊಂಡೇ ಮಾತನಾಡುತ್ತಿದ್ದೇನೆ. ಆ ಪ್ರಕಾರ ಇರುವುದರಿಂದ ಸ್ಪಷ್ಟವಾಗಿ ಆ ಮಾತುಗಳನ್ನು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು :– ಮಾನ್ಯ ರೇವಣ್ಣನವರೆ, ಮಾತನಾಡುವಾಗ ಮಾತ್ರ ತಮ್ಮ ಸ್ಥಾನಕ್ಕೆ ಹೋಗುವುದು ಬೇಡ. ದಯವಿಟ್ಟು ಅಲ್ಲಿಯೇ ಕುಳಿತಿರಿ.

(ಗೊಂದಲ)

ಶ್ರೀ ಸಿ.ಎಂ.ಉದಾಸಿ :– ನಾನು ವಿನಯಪೂರ್ವಕವಾಗಿ ಹೇಳುವುದಿಷ್ಟೆ. Imbalance ಎಲ್ಲಿ ಆಗಿದೆ, ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇನೆ.

ಉಪಾಧ್ಯಕ್ಷರು :– ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಟಿ.ಬಿ.ಜಯಚಂದ್ರ :– ಇದನ್ನು ಮುಕ್ತಾಯ ಮಾಡಿರುವುದರಿಂದ ಈ ಬಗ್ಗೆ ಚರ್ಚೆಗೆ ಅವಕಾಶವಿಲ್ಲ. ಈಗ ಗಮನಸೆಳೆಯುವ ಸೂಚನೆಗಳು. ಶ್ರಿಮತಿ ಸೀಮಾ ಅಶೋಕ್ ಮಸೂತಿಯವರೆ ತಾವು ಗಮನ ಸೆಳೆಯಿರಿ.

ತಾವುಗಳು , ತಮ್ಮ ಸ್ಥಾನಗಳಿಗೆ ಹೋಗಿ ಎಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡುತ್ತಿದ್ದೇನೆ. ನೀವು ಬಾವಿಯಲ್ಲಿ ನಿಂತುಕೊಂಡು ಮಾತನಾಡುವುದು ಬೇಡ ತಾವು ತಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಶ್ರೀಮತಿ ಸೀಮಾ ಅಶೋಕ್ ಮಸೂತಿ: ರಾಜ್ಯದ ಎಲ್ಲಾ ಮಹಿಳಾ ಕಾಲೇಜುಗಳನ್ನು ಬಿಜಾಪುರದಲ್ಲಿ ಏಕೈಕ ಹಾಗೂ ಪ್ರತಿಷ್ಟಿತ ಮಹಿಳಾ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡಿಸುವ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ(ಜಲಸಂಪನ್ಮೂಲ ಸಚಿವರು):–ಈ ವಿಷಯವು ಪದೇಪದೇ ಸದನದಲ್ಲಿ ಬರುವುದರಿಂದ ಕೆಲವೊಂದು ಗಂಭೀರವಾದ ಸಲಹೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರ ಯಾವುದೇ ವಿಷಯವನ್ನು ಮುಚ್ಚಿಡುವಂತಹ ಪ್ರಶ್ನೆ ಇಲ್ಲ. ಈಗಾಗಲೇ

ಅವರು ಹೇಳಿದ್ದಾರೆ. ಆದರೂ ಕೂಡ ಮಾನ್ಯ ವಿರೋಧಪಕ್ಷದ ನಾಯಕರು ಗಂಭೀರವಾದಂತಹ ಸಲಹೆಯನ್ನು ಕೊಟ್ಟಿದ್ದಾರೆ. ಮಾನ್ಯ ರೇವನ್ನನವರು ಮತ್ತು ಜೆಡಿಎಸ್‌ನ ಸದಸ್ಯರುಗಳು ಕೆಲವು ಆಕ್ಷೇಪವನ್ನು ಎತ್ತಿದ್ದಾರೆ. ಈ ಒಂದು ವಿಷಯದಲ್ಲಿ ಪಿಡಬ್ಲ್ಯೂಡಿ ಸಚಿವರುಗಳು ಒಂದು ವಿಶೇಷವಾದಂತಹ ಸಭೆಯನ್ನು ಕರೆದು ಫ್ಲೋರ್ ನಾಯಕರುಗಳನ್ನು ಕರೆದು ಏನೇನು ನಡೆದಿದೆ World Bankನಲ್ಲಿ approve ಎಷ್ಟು ಆಗಿದೆ, ಯಾವಾಗ ಎಷ್ಟೆಷ್ಟು ಹಣವು ಬಿಡುಗಡೆಯಾಗಿದೆ ಮತ್ತು ಯಾವ್ಯಾವ ರೋಡ್‌ಗಳನ್ನು ತೆಗೆದುಕೊಂಡಿದ್ದಾರೆ, ಬದಲಾವಣೆಯಾಗಿದ್ದರೆ ಏನಾಗಿದೆ ಈ ಬಗ್ಗೆ ಇದಕ್ಕೆ Project Governing Board ಎಂದು ಇದೆ. Chief Secretaryಯವರ ಅಧ್ಯಕ್ಷತೆಯಲ್ಲಿ ಇದು ಇದೆ. ಇ ಎಲ್ಲಾ ವಿಚಾರಗಳನ್ನು ಸನ್ಮಾನ್ಯ PWD ಮಂತ್ರಿಗಳು ಸಭೆಯನ್ನು ಕರೆದು ಫ್ಲೋರ್ ನಾಯಕರುಗಳನ್ನು ಕರೆದು ಎಲ್ಲಾ ವಿಷಯವನ್ನು ಮಂಡಿಸುತ್ತಾರೆ. ಏನಾದರೂ ತಪ್ಪುಗಳಿದ್ದರೆ ಅದನ್ನು ಸರಿಪಡಿಸುವುದಕ್ಕೆ ಅನುಕುಲವಾಗುತ್ತದೆ. ಇಲ್ಲಿ ಎಲ್ಲರ ಉದ್ದೇಶವೇನೆಂದರೆ, ಎಲ್ಲಾ ಭಾಗದಲ್ಲಿಯೂ ಸಮಗ್ರವಾಗಿ ಅಭಿವೃದ್ಧಿಯಾಗಬೇಕು. ನಮ್ಮ ನಮ್ಮ ಕ್ಷೇತ್ರಗಳು ಅಭಿವೃದ್ಧಿಯಾಗಬೇಕು. ಅದೇ ದೃಷ್ಟಿಕೋನ ಇದೆ. ಬೇರೆ ಏನೂ ದೊಡ್ಡ ವಿಚಾರವಿಲ್ಲ. ಆ ಹಿನ್ನೆಲೆಯಲ್ಲಿ ನಮ್ಮ PWD ಮಂತ್ರಿಗಳು ಎಲ್ಲರನ್ನು ಕರೆದು ಏನೇನು ಆಗಿದೆ ಎಂದು ಸಂಪೂರ್ಣವಾದ ವಿವರಗಳನ್ನು ಕೊಡುತ್ತಾರೆ. ಏನಾದರೂ ತಪ್ಪುಗಳು ಇದ್ದರೆ ಅದನ್ನು ಸರಿಪಡಿಸುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕಾಗಿ ಎಲ್ಲರೂ ಸೇರಿ ಮಾಡುವುದರಿಂದ ನಾನು ನಮ್ಮ ಜೆಡಿಎಸ್ ನಾಯಕರುಗಳಿಗೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಆ ಸಭೆಯಲ್ಲಿ ತಮ್ಮದೇನಾದರೂ ಆಕ್ಷೇಪಣೆಗಳು ಇದ್ದರೆ ವ್ಯಕ್ತಪಡಿಸಬಹುದು. ಬೇರೆ ಕಲಾಪಗಳು ನಡೆಯುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ :– ಜಾಗದ ಸಮಸ್ಯೆಯಿಂದ ಎಂದರೆ ನಾವು ಒಪ್ಪಿಕೊಳ್ಳುತ್ತೇವೆ. ಅವರು ರಿಪೋರ್ಟ್‌ನ್ನು ತರಿಸಲಿ, ರಸ್ತೆ ಮಾಡಲಿಕ್ಕೆ ಜಾಗದ ತೊಂದರೆಯಾಗಿದ್ದರೆ, acquisition ತೊಂದರೆಯಾಗಿದ್ದರೆ, ಆ ವಿಷಯವನ್ನು ಮಾನ್ಯ ಮಂತ್ರಿಗಳು ಹೇಳಿದರು.

ಉಪಾಧ್ಯಕ್ಷರು :– ಈಗ ಈಗ ವಿಚಾರವನ್ನು ಮುಕ್ತಾಯ ಮಾಡಿರುವುದರಿಂದ ಮತ್ತೆ ಚರ್ಚೆಗೆ ಅವಕಾಶವಿಲ್ಲ. ಚರ್ಚೆ ಮಾಡಬೇಕೆಂದರೆ ಆಮೇಲೆ ಚರ್ಚೆ ಮಾಡೋಣ. ಈಗ ಬೇರೆ ವಿಚಾರಕ್ಕೆ ಹೋಗಿದ್ದೇನೆ.

(ಈ ಹಂತದಲ್ಲಿ ಮಾನ್ಯ ಬಾಲಕೃಷ್ಣರವರು ತಮ್ಮ ಸ್ಥಾನಕ್ಕೆ ಹೋದರು)

ಶ್ರೀ ಹೆಚ್.ಸಿ.ಬಾಲಕೃಷ್ಣ :– ದಯವಿಟ್ಟು ಅದನ್ನು ಸರಿಪಡಿಸುವುದಕ್ಕೆ ಹೇಳಿ. ಜಾಗದ ಸಮಸ್ಯೆ ಇದ್ದರೆ ನಾವೆಲ್ಲಾ ಒಪ್ಪಿಕೊಳ್ಳುತ್ತೇವೆ. ನಾವೆಲ್ಲರೂ

ಲಿಗ್ಗಿ ಬಿಸ್ಸಿ ಸಿ ಇಲ್ಲಿ

ವೆಲ್‌ನಿಂದ ವಾಪಸ್ಸು ಹೋಗುತ್ತೇವೆ. ಜಾಗದ ಸಮಸ್ಯೆ ಇಲ್ಲದೆ ಸುಮ್ಮನೆ ಗೊಂದಲ ಮಾಡುವುದಕ್ಕೆ ಜಾಗದ ಸಮಸ್ಯೆ ಎಂದು ಹೇಳಿದರೆ ಒಪ್ಪುವುದಕ್ಕಾಗುತ್ತದೆಯೇ? ದುರುದ್ದೇಶದಿಂದ ಇದನ್ನು ಬದಲಾವಣೆ ಮಾಡಿರತಕ್ಕಂಥದ್ದು. ಅದನ್ನು ಸರಿಪಡಿಸುವುದಕ್ಕೆ ಮಾನ್ಯ ಮಂತ್ರಿಗಳಿಗೆ ಹೇಳಬೇಕು. ಅಲ್ಲಿ ಜಾಗ ಇಲ್ಲವೆಂದರೆ ನಾವು ಒಪ್ಪಿಕೊಳ್ಳುತ್ತೇವೆ. ಮಾನ್ಯ ಮಂತ್ರಿಗಳು ಸದನದಲ್ಲಿ ಸುಳ್ಳು ಹೇಳಿದರೆ ನಾವು ಎಲ್ಲಿ ಹೋಗುವುದು ಸ್ವಾಮಿ?

ಶ್ರೀ ಸಿದ್ದು ಸವದಿ :– ಆಗ ಉತ್ತರ ಕರ್ನಾಟಕದ ನಮ್ಮ ಜಿಲ್ಲೆಗಳಿಗೆ ಅನ್ಯಾಯವಾಗಿದೆ. ಇವರು ಮೊದಲು ಯಾವ ರೀತಿ ಅನ್ಯಾಯ ಮಾಡಿದರು ಎನ್ನುವ ಬಗ್ಗೆ ತನಿಖೆಯಾಗಬೇಕು. ಅದನ್ನು ಸರಿಪಡಿಸುವ ಕೆಲಸವನ್ನು ಈಗ ನಮ್ಮ ಸರ್ಕಾರ ಮಾಡುತ್ತಿದೆ. 3500 ಕೋಟಿ ರೂ.ಗಳನ್ನು ಆ ಭಾಗಕ್ಕೆ ಕೊಟ್ಟು ನಮ್ಮ ಭಾಗಕ್ಕೆ 1500 ಕೋಟಿ ಕೊಟ್ಟು ನಮ್ಮ ಭಾಗಕ್ಕೆ ಅನ್ಯಾಯವನ್ನು ಮಾಡಿರುತ್ತಿರಿ.

ಶ್ರೀ ಹೆಚ್.ಸಿ.ಬಾಲಕೃಷ್ಣ :– ಅನ್ಯಾಯ ಆಗಿರುವುದನ್ನು ಅವರು ಸರಿಪಡಿಸಲಿ. ಅದಕ್ಕೆ ನಮ್ಮದೇನೂ ತಕರಾರಿಲ್ಲ. ನಮ್ಮ ಮೂಲ ಪ್ರಶ್ನೆ ಏನೆಂದರೆ ಜಾಗ ಇಲ್ಲವೆಮದು ಅದನ್ನು ಬದಲಾವಣೆ ಮಾಡಿದ್ದೇವೆಂದು ಹೇಳಿದ್ದಾರೆ. ಜಾಗವಿಲ್ಲವೆಂದರೆ ಅವರು ಬದಲಾವಣೆಯನ್ನು ಮಾಡಿಕೊಳ್ಳಲಿ. ಜಾಗವಿದ್ದರೆ ವಾಪಸ್ಸು ಕೊಡಲಿ. ಎರಡರಲ್ಲಿ ಒಂದನ್ನು ನೀವು ತೀರ್ಮಾನ ಮಾಡಿ. ಅವರು ಕೊಟ್ಟಿರತಕ್ಕಂಥ ಕಾರನ ಸರಿ ಇದ್ದರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ.

ಉಪಾಧ್ಯಕ್ಷರು :– ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ.ಎಂ.ಉದಾಸಿ :– ಮಾನ್ಯ ಸದಸ್ಯರು ಹೇಳಿದ ಹಾಗೆ ಎಲ್ಲಿ 3411 ಕಿ.ಮೀ.ರಸ್ತೆಗಳಿಗೆ ಒಂದು ಸಲ ಕ್ಯಾಬಿನೆಟ್ ಅಪ್ರೂವಲ್‌ನ್ನು ಕೊಟ್ಟಮೇಲೆ state-wise tenderನ್ನು ಕರೆಯಬೇಕಾದಾಗ ಪ್ರತಿ ಸಾರಿಯೂ ಅದು ಕ್ಯಾಬಿನೆಟ್‌ಗೆ ಹೋಗುವ ಅವಶ್ಯಕತೆ ಇಲ್ಲ.

(ಈ ಹಂತದಲ್ಲಿ ಮಾನ್ಯ ಬಾಲಕೃಷ್ಣರವರು ಸದನದ ಬಾವಿಗೆ ಬಂದರು)

ಉಪಾಧ್ಯಕ್ಷರು :– ಸದನದ ಬಾವಿಯಿಂದ ದಯವಿಟ್ಟು ಯಾರು ಮಾತನಾಡಬೇಡಿ. ಉತ್ತರವನ್ನು ಕೊಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು :– ಮಾನ್ಯ ರೇವಣ್ಣನವರೆ, ತಾವು ಹಿರಿಯ ಸದಸ್ಯರಿದ್ದೀರಿ. ಸದನದ ಬಾವಿಗೆ ಬರುತ್ತೀರಿ, ಒಂದೊಂದು ಸಾರಿ ತಮ್ಮ ಸ್ಥಾನಕ್ಕೆ ಹೋಗುತ್ತೀರಿ. ಎಲ್ಲರೂ ತಮ್ಮ ಸ್ಥಾನಕ್ಕೆ ಹೋಗಿ.

(ಗೊಂದಲ)

ಉಪಾಧ್ಯಕ್ಷರು :– ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಂಡಿರುತ್ತೇನೆ. ದಯವಿಟ್ಟು ಎಲ್ಲರೂ ಸಹಕರಿಸಿ.

ಶ್ರೀ ಸಿದ್ದು ಸವದಿ :– ನಮಗೆ ಮಾತನಾಡುವುದಕ್ಕೆ 5 ನಿಮಿಷ ಸಮಯವನ್ನು ಕೊಡಿ.

ಉಪಾಧ್ಯಕ್ಷರು :– ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದು ಸವದಿ :– ನಮ್ಮಲ್ಲಿ ಬಡ ಮಕ್ಕಳು ಓದುತ್ತಿದ್ದಾರೆ. ದೊಡ್ಡ ಪ್ರಮಾಣದ ಹಗರಣ ಆಗಿರುವುದರಿಂದ ಅದರ ಬಗ್ಗೆ ತನಿಖೆಯಾಗಬೇಕು?

(ಗೊಂದಲ)

ಶ್ರೀ ಪ್ರಕಾಶ್ ಬಿ.ಹುಕ್ಕೇರಿ :– ಈ ಸಮಸ್ಯೆ ಬಗೆಹರಿಯಬೇಕಾದರೆ ದಯಮಾಡಿ ಉಮೇಶ್ ಕತ್ತಿಯವರಿಗೆ ಹೇಳಿಬಿಡಿ.

ಉಪಾಧ್ಯಕ್ಷರು :– ನಾನು ಗಮನ ಸೆಳೆಯುವ ಸೂಚನೆ ಆಗಲೇ ತೆಗೆದುಕೊಂಡಿರುವುದರಿಂದ ತಾವು ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ. ಸದನವನ್ನು ನಡೆಸಲಿಕ್ಕೆ ಅವಕಾಶವನ್ನು ಮಾಡಿಕೊಡಿ. ಸಾಕಷ್ಟು ಚರ್ಚೆಯಾಗಿದೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ, ಸಲಹೆಯನ್ನು ಕೊಟ್ಟಿದ್ದಾರೆ. ಸದನದ ಬಾವಿಯಲ್ಲಿರುವವರು ಯಾರು ಮಾತನಾಡಬೇಡಿ, ಮಾತನಾಡುವುದು ಇದ್ದರೆ ತಮ್ಮ ಸ್ಥಾನಕ್ಕೆ ಹೋಗಿ.

(ಗೊಂದಲ)

ಶ್ರೀ ಸಿ.ಟಿ.ರವಿ :– ಬೆಳಗಾಂ ಅಧಿವೇಶನ ಸಂದರ್ಭದಿಂದಲೂ ಈ ನಿರ್ಣಯವನ್ನು ನಾನು ಮಂಡಿಸಬೇಕೆಂದು ಇದ್ದೆ. ಅಲ್ಲಿ ಅವಕಾಶ ಸಿಗಲಿಲ್ಲ. ಪರಿಸರಕ್ಕೆ ಆಗತಕ್ಕಂಥ ಹಾನಿಯನ್ನು ಮುಂದಿಟ್ಟುಕೊಂಡು ತಡೆಗಟ್ಟುವ ಸಲುವಾಗಿ ಎಲ್ಲಾ ರಿತಿಯ ಪ್ಲಾಸ್ಟಿಕ್ ಬಳಕೆಯ production ದಿಂದ ಹಿಡಿದು marketing ನಿಂದ ಹಿಡಿದು, ಅದರ ಉಪಯೋಗದವರೆಗೆ, ಅದರ ನಿರ್ಣಯವನ್ನು ಮಂಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು :– ಮಾನ್ಯ ಸಚಿವರು ಸಾಕಷ್ಟು ಉತ್ತರವನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಸಿದ್ದು ಸವದಿ :– ಅವರು ಏನು ಹಗರಣವನ್ನು ಮಾಡಿದ್ದಾರೆ, ಏನೇನು ಅನ್ಯಾಯವನ್ನು ಮಾಡಿದ್ದಾರೆ. ನನಗೆ ಮಾತನಾಡಲು ಅವಕಾಶ ಕೊಡಿ.

ಉಪಾಧ್ಯಕ್ಷರು :– ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದನವು 8 ಗಂಟೆ 20 ನಿಮಿಷಕ್ಕೆ ಮುಕ್ತಾಯಗೊಂಡು ಪುನ: 10 ನಿಮಿಷದ ನಂತರ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನ: 9 ಗಂಟೆ 7 ನಿಮಿಷಕ್ಕೆ ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

(ಜೆಡಿಎಸ್ ಶಾಸಕಾಂಗ ಪಕ್ಷದ ಶಾಸಕರು ಬಾವಿಯಲ್ಲಿ ಬಂದು ಧರಣಿ ಮುಂದುವರೆಸಿದರು)

ಉಪಾಧ್ಯಕ್ಷರು :– ಎಲ್ಲಾ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ, ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು.

ಶ್ರೀ ಎಸ್. ಸುರೇಶ್ ಕುಮಾರ್ :– ತಾವೂ ಲೋಕೋಪಯೋಗಿ ಸಚಿವರಾಗಿದ್ದವರು ದಯವಿಟ್ಟು ತಮ್ಮ ಸ್ಥಾನಕ್ಕೆ ಬನ್ನಿ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಾನೂನು ಮಂತ್ರಿಗಳು ಏನು ಹೇಳಿದ್ದಾರೆ. ಎಲ್ಲಿ ಲ್ಯಾಂಡ್ ಅಕ್ವಿಜಿಷನ್ ಇಲ್ಲ, ಅಂತಹ ಕಡೆ ಕೈಬಿಡಿ ನಮ್ಮದೇನೂ ಅಭ್ಯಂತರವಿಲ್ಲ. ಲೋಕೋಪಯೋಗಿ ಸಚಿವರು ಲ್ಯಾಂಡ್ ಅಕ್ವಿಜಿಷನ್ ಇರುವಂತಹ ಕಡೆ ತೊಂದರೆ ಇರುವ ಕಡೆ ಕೈ ಬಿಡುತ್ತೇವೆಂದು ಹೇಳಿದ್ದಾರೆ. ಉಳಿದ ಕಡೆ ರಸ್ತೆಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಕಾನೂನು ಸಚಿವರ ಸಮ್ಮುಖದಲ್ಲಿ ಹೇಳಿದ್ದಾರೆ. ಅದು ಮಾಡಿ. ಇಲ್ಲವೆಂದರೆ ನಾವು ಸಭಾತ್ಯಾಗ ಮಾಡಬೇಕಾಗುತ್ತದೆ. 585 ಕಿ.ಮೀ. 375 ಕಿ.ಮೀ. ರಸ್ತೆ ಒಂದೇ ಕಡೆ ಬದಲಾವಣೆ ಮಾಡಿದ್ದಾರೆ. ಅದರ ವಿರುದ್ಧ ಮಾನ್ಯ ಖರ್ಗೆ ಸಾಹೇಬರು ಏನು ಹೇಳುತ್ತಾರೆ, ಅದನ್ನು ನೋಡಿಕೊಂಡು ನಾವು ವಾಕ್ ಔಟ್ ಮಾಡುತ್ತೇವೆ.

ಶ್ರೀ ಸಿ.ಎಂ. ಉದಾಸಿ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರ ಕೋರಿಕೆಯನ್ನು ನಾನು ಗಮನಿಸಿದ್ದೇನೆ. ಈಗ ಟೆಂಡರ್ ಕರೆದಿರುವುದರಿಂದ ಇದರಲ್ಲಿ ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಮತ್ತೊಂದು ಹಂತದಲ್ಲಿ ಎರಡು–ಮೂರು ತಿಂಗಳಲ್ಲಿ ಮತ್ತೆ ಟೆಂಡರ್ ಕರೆಯಬೇಕಾಗಿದೆ. ಟೆಂಡರ್ ಕರೆಯಬೇಕಾದಾಗ ಆದ್ಯತೆಯನ್ನು ಈಗ ಬಿಟ್ಟಿರುವುದರಲ್ಲಿ ಈಗ ಮಾಡಬೇಕಾಗಿರುವ ಕೆಲಸದಲ್ಲಿ ನಾವು 3411 ಕಿ.ಮೀ. ರಸ್ತೆಗಳ ಆಯ್ದ ಪಟ್ಟಿಗಳಲ್ಲಿ ಮಾಡಬೇಕಾಗಿದೆ. ಆ ಪಟ್ಟಿಯ ಪ್ರಕಾರ ಈಗ ಬಿಟ್ಟಿರುವುದಕ್ಕೆ ಪ್ರಥಮ ಆದ್ಯತೆ ಕೊಟ್ಟು ಮಾಡಿಸಿ ಕೊಡುತ್ತೇವೆನ್ನುವಂತಹ ಭರವಸೆಯನ್ನು ಕೊಡುತ್ತೇನೆ. ದಯವಿಟ್ಟು ಅವರು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :– ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಈ ಪ್ರಶ್ನೋತ್ತರ ಕಾಲದಲ್ಲಿ ಪ್ರಸ್ತಾಪವಾದಂತೆ ಕೆಶಿಪ್‌ನಲ್ಲಿ ತೆಗೆದುಕೊಂಡಂತಹ ರಸ್ತೆಗಳ ಬಗ್ಗೆ ಮತ್ತು ಅದರ ತಾರತಮ್ಯದ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ ಮತ್ತು ಸದಸ್ಯರು ಕೂಡ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಕೊಟ್ಟಿದ್ದಾರೆ. ಒಂದಂತೂ ನಿಜ. ಮಾನ್ಯ ಲೋಕೋಪಯೋಗಿ ಸಚಿವರು ಒಪ್ಪಿಕೊಳ್ಳುತ್ತಾರೆ. ಒಪ್ಪಿಕೊಂಡಿದ್ದಾರೆ. ಅವರಿಗೆ ಕಷ್ಟ ಏನಿದೆ ಎಂದರೆ, ಈಗ ಮಾಡಿದ್ದೇನೆ, ಏಕೆ ಬದಲಾವಣೆ ಮಾಡಬೇಕು ಎನ್ನುವುದು ಅವರಿಗೆ ಸ್ವಲ್ಪ ತೊಂದರೆಯಾಗುತ್ತಿದೆ. ಆದರೆ ಹಿಂದಿನ ಪ್ರೊಸಿಡಿಂಗ್ಸ್ ನೋಡಿದಾಗ ಯಾವ್ಯಾವ ಕೆಲಸಗಳನ್ನು ಅವರು ತೆಗೆದುಕೊಂಡಿದ್ದರು, ಆ ಕೆಲಸಗಳಲ್ಲಿ ಬದಲಾವಣೆಯನ್ನು ಮಾಡಿಕೊಂಡು ಟೆಂಡರ್ ಕಾಲ್ಫರ್ ಮಾಡಿದ್ದಾರೆ.

ಅದಕ್ಕೆ ನಾವೇನು ಹೇಲಿದ್ದೇವೆ, ನೀವು ಏನು ಟೆಂಡರ್ ಕಾಲ್ಫರ್ ಮಾಡಿದ್ದೀರಿ, ಅನೇಕ ಸಾರಿ ಕ್ಯಾನ್ಸಲ್ ಮಾಡಿದ್ದಿರಿ. ಇದು ಸರ್ವ ಭಾಗದ ಹಿತದೃಷ್ಟಿಯಿಂದ ಎಲ್ಲರಿಗೂ ಅನುಕೂಲವಾಗಲಿ ಎಂದು ಮಾಡುವುದು. ಇದರಲ್ಲಿ ವಿಶೇಷವಾಗಿ ಏನಾಗಿದೆ, ಮಾನ್ಯ ಸುರೇಶ್‌ಗೌಡರ ಕ್ಷೇತ್ರಕ್ಕೆ ಎಫೆಕ್ಟ್ ಆಗಿದೆ. ಅವರ ಮೂರು ಜನ ಸದಸ್ಯರು ಜೊತೆಗೆ ನಮ್ಮ ಮಾನ್ಯ ಸದಸ್ಯರಾದ ಕಿಮ್ಮನೆ ರತ್ನಾಕರ್ ಅವರ ಕ್ಷೇತ್ರದಲ್ಲಿ ಕೆಲವು ಪೋರ್ಷನ್, ಎಫೆಕ್ಟ್ ಆಗಿದೆ. ನಾನು ಏನು ಹೇಳುತ್ತಿದ್ದೇನೆಂದರೆ, ಅನೇಕ ಜನರಿಗೆ ನೀವು ಮೊದಲು ಅದನ್ನು ತೋರಿಸಿ ಇದು ಸ್ಯಾಂಕ್ಷನ್ ಆಗಿದೆ ಎಂದು ಹೇಳಿ, ಈಗ ತಕ್ಷಣ ನೀವು ಬದಲಾವಣೆ ಮಾಡಿ ಬೇರೆ ನೀವು ಕಾಲ್ಫರ್ ಮಾಡಿದರೆ, ಇದು ಸರಿಯಾಗುವುದಿಲ್ಲ. ಅದಕ್ಕೆ ಬದಲಾವಣೆ ಮಾಡಿ ಕೊಡುತ್ತೇವೆಂದು ಮೊದಲು ಹೇಳಿದಿರಿ. ಈಗ ನಾನು ಅದನ್ನು ಟೆಂಡರ್ ಕಾಲ್ಫರ್ ಮಾಡಿದ್ದೇನೆ, ಮಾಡುವುದಕ್ಕಾಗುವುದಿಲ್ಲ. ನಾನು ಮೇ ತಿಂಗಳಲ್ಲಿ ಇದನ್ನು ಖಂಡಿತವಾಗಿ ಮಾಡಿ ಕೊಡುತ್ತೇನೆ ಎನ್ನುವಂತಹ ಮಾತನ್ನು ಹೇಳುತ್ತಿದ್ದಾರೆ. ಇದನ್ನು ನಾವು ಅನೇಕ ಸಲ ಪ್ರಸ್ತಾಪ ಮಾಡಿಕೊಂಡೇ ಹೋಗುತ್ತಿದ್ದೇವೆ. ಪಿ.ಡಬ್ಲ್ಯೂ.ಡಿ. ರಸ್ತೆ ಇರಬಹುದು, ಕೇ–ಶಿಪ್ ರಸ್ತೆ ಇರಬಹುದು, ಕೆ.ಆರ್.ಡಿ.ಸಿ. ಇರಬಹುದು, ಬೇರೆ ಬೇರೆ ಎಲ್ಲದರಲ್ಲಿಯೂ ಕೂಡ ಈ ರೀತಿಯಾದಂಥ ವ್ಯತ್ಯಾಸಗಳು ಆಗುತ್ತಿವೆ. ಈ ರೀತಿಯಾಗದೇ ಇರುವಂಥ ರೀತಿಯಲ್ಲಿ ನೋಡಿಕೊಂಡು ಹೋಗತಕ್ಕಂಥ ಜವಾಬ್ದಾರಿ ತಮ್ಮದಾಗಿದೆ. ಇವತ್ತು ಕಡೆಯ ದಿವಸ ಬೇರೆಯಾಗಿದೆ. ಅದರಲ್ಲಿಯೂ ಇವತ್ತು ಮಾನ್ಯ ಮುಖ್ಯಮಂತ್ರಿಗಳ ಹುಟ್ಟುಹಬ್ಬವಾಗಿದೆ. ಇವತ್ತು ಅವರು ಸದನದ ಕಾರ್ಯಕಲಾಪವನ್ನು ಅಂತಿಮಗೊಳಿಸಬೇಕೆನ್ನುತ್ತಾರೆ. ಆದರೆ ಅಷ್ಟೇ ಲಾರ್ಜ್ ಅಟೆಂಡೆನ್ಸ್ ಇಲ್ಲ. ನಾನು ಅವರು ಮಾತನಾಡುವಾಗ ಇರಲಿಲ್ಲ. ಅವರು ತಮ್ಮ ಭಾಷಣದಲ್ಲಿ ಮತ್ತೆ ಕೆಲವು ಬೋನಸ್‌ಗಳನ್ನು, ಗಿಫ್ಟ್‌ಗಳನ್ನು ಕೊಟ್ಟರು ಎಂಬುದನ್ನು ನಾನು ನೋಡಿದೆ. ಅವರು ಬಂದಕೂಡಲೇ ಕೆಲವು ಬಿಟ್ಟು ಹೋದಂಥ ಅನೇಕ ಜಾತಿಗಳಿಗೆ ಇನ್ನೊಂದನ್ನು ಕೊಟ್ಟರು ಎಂದು ಹೇಳಿದರು. ಅವರು ಮಾತನಾಡುವಾಗ ಶೆಡ್ಯೂಲ್ಟ್ ಕ್ಯಾಸ್ಟ್ ಬಗ್ಗೆ ಹೇಗೆ ತಾರತಮ್ಯಗಳಾಗಿವೆ ಎಂಬ ಬಗ್ಗೆ ಕೂಡ ಹೇಳಿದರಂತೆ. ನಾನು ಅವರು ಮಾತನಾಡುವ ಸಂದರ್ಭದಲ್ಲಿ ಇದ್ದಿದ್ದರೆ ಅದಕ್ಕೆ ನಾನು ಸರಿಯಾದ ರೀತಿಯಲ್ಲಿ ಜವಾಬು ಕೊಡುತ್ತಿದ್ದೆ. ಯಾರು ಯಾವ ಕಾಲದಲ್ಲಿ ಇಡೀ ದೇಶದಲ್ಲಿಯೇ ಏನು ಪರಿಸ್ಥಿತಿ ಇದೆ, ನಮ್ಮ ರಾಜ್ಯದಲ್ಲಿ ಏನು ಪರಿಸ್ಥಿತಿ ಇದೆ ಎನ್ನತಕ್ಕಂಥದ್ದರ ಬಗ್ಗೆ ನಾನು ಹೇಳಬಹುದಾಗಿತ್ತು. ಆದರೆ ಆ ಸಂದರ್ಭದಲ್ಲಿ ನಾನು ಇರಲಿಲ್ಲ ಅದಕ್ಕಾಗಿ ಆ ಬಗ್ಗೆ ಈಗ ನಾನು ಪ್ರಸ್ತಾಪ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಈಗೇನಾಗಿದೆಯೆಂದರೆ, ಮುಖ್ಯಮಂತ್ರಿಗಳದ್ದು, ನನಗೆ ಒಂದು ಕಥೆ ಜ್ಞಾಪಕ ಬರುತ್ತಿದೆ. ಇಂದು ಕಡೆಯ ದಿವಸ ಹೇಳುತ್ತೇನೆ. ಇಬ್ಬರು ಬಹಳ ಒಳ್ಳೆಯ ಫ್ರೆಂಡ್ಸ್ ಇದ್ದರು. ಕ್ಲಾಸ್‌ಮೇಟ್ಸ್‌ಗಳಾಗಿ ಇಬ್ಬರು ಚೆನ್ನಾಗಿ ಇಂಜಿನಿಯರಿಂಗ್‌ನಲ್ಲಿ ಓದಿದ್ದರು. ಒಂದೇ ಕಡೆ ಯಾವಾಗಲೂ ಇರುತ್ತಿದ್ದರು.

ಅದರಲ್ಲಿ ಒಬ್ಬ ಏನು ಮಾಡಿದನೆಂದರೆ, ತನ್ನ ಆಸ್ತಿ ಪಾಸ್ತಿ ಉಳಿಸಿಕೊಳ್ಳಬೇಕು, ಇಲ್ಲಿಯೇ ಇರಬೇಕು ಮತ್ತು ರೈತನಾಗಿರಬೇಕೆಂದು ತೀರ್ಮಾನ ಮಾಡಿ ಅವನು ಭಾರತ ದೇಶದ ತನ್ನ ಊರಿನಲ್ಲಿಯೇ ಉಳಿದುಕೊಂಡ. ಇನ್ನೊಬ್ಬನು ತಾನು ಬಿ.ಇ. ಕಲಿತಿದ್ದೇನೆ, ಇಲ್ಲೇ ಉಳಿದರೆ ಬಹಳ ವೇಸ್ಟ್ ಆಗುತ್ತದೆಂದು ತಿಳಿದು ಹೊರದೇಶಕ್ಕೆ ಹೋಗಬೇಕೆಂದು ತೀರ್ಮಾನ ಮಾಡಿ ಅವನು ಹೊರದೇಶದಲ್ಲಿ ಸಿಕ್ಕಂಥ ನೌಕರಿಗೆ ಹೋದ. ಆಮೇಲೆ ಅವನು ಅಲ್ಲಿಗೆ ಹೋದಮೇಲೆ ಅಲ್ಲಿ ಸುಖವಾಗಿದ್ದು ಚೆನ್ನಾಗಿ ಆದಾಯವನ್ನು ಕೂಡ ಗಳಿಸಿಕೊಂಡು ಅಲ್ಲಿಯೇ ಇದ್ದ. ಹತ್ತು-ಹದಿನೈದು ವರ್ಷವಾದ ಮೇಲೆ ಕಡೆಗೆ ಭಾರತ ದೇಶಕ್ಕೆ ಬಂದ. ಅವನು ಊರಿನಲ್ಲಿಯೇ ಇದ್ದ ತನ್ನ ತಂಗಿಗೆ ಮದುವೆಯನ್ನು ಮಾಡಬೇಕಾಗಿತ್ತು. ಸಹಜವಾಗಿ ಹೊರದೇಶದಿಂದ ಗಳಿಸಿಕೊಂಡು ಬಂಧಂಥ ಸಂಪತ್ತಿನಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡಿ ತಾನು ತನ್ನ ತಂಗಿಗೆ ವೈಭವದಿಂದ ಮದುವೆ ಮಾಡಿ ತನ್ನ ವೈಭವವನ್ನು ತೋರಿಸಬೇಕೆಂದು ಹೇಳಿ ಅವನು ಎಲ್ಲಾ ಪ್ರಯತ್ನಗಳನ್ನೂ ಮಾಡಿದ. ಆದರೆ ಅವನು ಊರು ಬಿಟ್ಟು ಹೋಗಿ ಹದಿನೈದು ಇಪ್ಪತ್ತು ವರ್ಷವಾಗಿದ್ದರಿಂದ ಊರಿನಲ್ಲಿ ಅವನನ್ನು ಯಾರೂ ಗುರುತಿಸುತ್ತಿರಲಿಲ್ಲ. ಇವನು ಬಹಳ ಚಿಕ್ಕ ವಯಸ್ಸಿನಲ್ಲಿಯೇ ಹೋಗಿದ್ದರಿಂದ ಶಾರೀರಿಕವಾಗಿ ಬಹಳ ಬದಲಾವಣೆಗಳಾಗಿತ್ತು. ಸಹಜವಾಗಿ ಇವನು ಇಪ್ಪತ್ತು ವರ್ಷಗಳ ನಂತರ ಬಂದಿದ್ದರಿಂದ ಊರಿನವರು ಇವನನ್ನು "ಇವನು ಯಾರು," "ಇವರು ಯಾರು" ಎಂದು ಕೇಳುತ್ತಿದ್ದರು. ಅದಕ್ಕೆ ಅವನು ಏನು ಮಾಡಿದನೆಂದರೆ, ತನ್ನ ತಂಗಿ ಲಗ್ನವಿದೆ, ನಾನು ಏನು ಮಾಡಲಿ, ನನಗೆ ಯಾರೂ ಪರಿಚಯವಿಲ್ಲವೆಂದು ತಿಳಿದುಕೊಂಡು ತನ್ನ ಕ್ಲಾಸ್‌ಮೇಟ್ ಹತ್ತಿರ ಹೋದ. ನೋಡಪ್ಪಾ ನನ್ನ ತಂಗಿಯ ಲಗ್ನ ಫಿಕ್ಸ್ ಮಾಡಿದ್ದೇನೆ, ಅದಕ್ಕಾಗಿ ಈಗ ಎಲ್ಲಾ ಕಡೆ ಹೋಗಿ ಆಮಂತ್ರಣ ಪತ್ರಿಕೆಯನ್ನು ಕೊಡಬೇಕಾಗಿದೆ. ದಯವಿಟ್ಟು ನೀನು ನನ್ನ ಜೊತೆಗೆ ಬಂದು ಸಹಕರಿಸಬೇಕು ಎಂದು ಕೇಳಿಕೊಂಡ. ಅದಕ್ಕೆ ಇವನು ಏನು ಹೇಳಿದನೆಂದರೆ, ನಾನು ಊರು ಬಿಟ್ಟು ಹೊರಗಡೆಯೇ ಹೋಗಿಲ್ಲ, ನನ್ನ ಪರಿಸ್ಥಿತಿ ಬಹಳ ಕೆಟ್ಟುಹೋಗಿದೆ, ನನ್ನ ಮೈ ಮೇಲೆ ಬಟ್ಟೆ ಕೂಡ ಸರಿಯಾಗಿಲ್ಲ, ಬರಗಾಲ ಬಂದದ್ದರಿಂದ ನಾನು ಈಗ ಸಾಕಷ್ಟು ತೊಂದರೆಯಲ್ಲಿದ್ದೇನೆ. ಅದಕ್ಕಾಗಿ ನಾನು ಹೊರಗಡೆ ಮುಖ ತೋರಿಸುವಂತಿಲ್ಲ, ನಾನು ಮನೆಯಲ್ಲಿಯೇ ಇರುತ್ತೇನೆ, ನಾನು ನಿನ್ನ ಜೊತೆಯಲ್ಲಿ ಬರುವುದಕ್ಕಾಗುವುದಿಲ್ಲ, ಅದೂ ಅಲ್ಲದೇ ನೀನು ಇಷ್ಟು ದೊಡ್ಡ ಶ್ರೀಮಂತನಾಗಿದ್ದಿ, ನಿನ್ನ ಜೊತೆಯಲ್ಲಿ ನಾನು ಬಂದರೆ ಜನರು ನನ್ನನ್ನು ನೋಡಿ ನಗುತ್ತಾರೆ, ಅದಕ್ಕಾಗಿ ನಾನು ನಿನ್ನ ಜೊತೆಯಲ್ಲಿ ಬರುವುದಿಲ್ಲವೆಂದ. ಆದರೆ ಇವನ ಮಾತನ್ನು ಕೇಳದ ಸ್ನೇಹಿತನೆಂದ, ಅವೆಲ್ಲಾ ಆಗುವುದಿಲ್ಲ, ಎಷ್ಟೇ ಆದರೂ ನಾವಿಬ್ಬರೂ ಚಿಕ್ಕಂದಿನಿಂದ ಗೆಳೆಯರಾಗಿದ್ದೇವೆ, ನೀನು ಬರಲೇಬೇಕು, ನೀನು ಬರದೇ ಹೋದರೆ ನಾನು ನನ್ನ ತಂಗಿಯ ಲಗ್ನ ಮಾಡುವುದಕ್ಕೆ ಆಗುವುದಿಲ್ಲ, ದಯವಿಟ್ಟು ನೀನು

ಸಹಕರಿಸಬೇಕೆಂದು ಅವನನ್ನು ಕೇಳಿಕೊಂಡ. ಒಂದಲ್ಲ, ಎರಡಲ್ಲ, ಮೂರು ಸಲ ವಿನಂತಿ ಮಾಡಿ ಸ್ನೇಹಿತನನ್ನು ಕೇಳಿಕೊಂಡ ಮೇಲೆ ಕಡೆಗೆ ವಿನೂ ಫಾಪ ತಂಗಿಯ ಲಗ್ನ ಮಾಡುತ್ತಿದ್ದಾನೆ. ಇದಕ್ಕೆ ಸಹಕರಿಸಬೇಕೆಂದು ತೀರ್ಮಾನ ಮಾಡಿಕೊಂಡು ಗೆಳೆಯನ ಜೊತೆ ಅತನ ತಂಗಿಯ ಮದುವೆಯ ಆಹ್ವಾನ ಪತ್ರಿಕೆಯನ್ನು ಹಂಚಲು ಬರುವುದಕ್ಕೆ ಒಪ್ಪಿಕೊಂಡ. ಬರುವುದಕ್ಕೇನೋ ಒಪ್ಪಿಕೊಂಡ, ಆದರೆ ಅವನಿಗೆ ಒಳ್ಳೆಯ ಬಟ್ಟೆ ಇರಲಿಲ್ಲ, ಏನು ಮಾಡುವುದು ಎಂದು ಯೋಚನೆ ಮಾಡುತ್ತಿದ್ದ. ಆಗ ಅವನ ಗೆಳೆಯ ಹೇಳಿದ, ನಾನು ದುಬೈನಿಂದ ಬರುವಾಗ ರೆಡಿಮೇಡ್ ಬಟ್ಟೆಗಳನ್ನು ತಂದಿದ್ದೇನೆ, ಶೆರ್ವಾನಿಯನ್ನೂ ಕೂಡ ತಂದಿದ್ದೇನೆ, ಪೈಜಾಮವನ್ನೂ ತಂದಿದ್ದೇನೆ, ಹೊಸ ಚಪ್ಪಲಿಗಳನ್ನೂ ತಂದಿದ್ದೇನೆ ಮತ್ತು ಸದನದಲ್ಲಿರುವ ಕುಳಿತಿರುವ ನಮ್ಮ ಕಟ್ಟಾ ಸುಬ್ರಹ್ಮಣ್ಯನಾಯ್ಡುರವರು ಹಾಕಿಕೊಳ್ಳುವ ಟೋಪಿಯನ್ನೂ ಕೂಡ ತಂದಿದ್ದೇನೆ ಎಂದು ಹೇಳಿದ. ಆ ರೀತಿಯಲ್ಲಿ ಹೇಳಿದ ತಕ್ಷಣ ಇವನೇನು ಹೇಳಿದನೆಂದರೆ, ಬೇಡಪ್ಪಾ, ಆ ರೀತಿಯಲ್ಲಿ ಎಲ್ಲವನ್ನೂ ಹೊಸದಾಗಿರುವುದನ್ನು ನಾನು ಹಾಕಿಕೊಂಡಿರುವುದನ್ನು ನೋಡಿದರೆ ಜನರು ನನ್ನನ್ನು ನೋಡಿ ನಗುತ್ತಾರೆ ಮತ್ತು ಇವೆಲ್ಲವೂ ನಿನಗೆ ಎಲ್ಲಿಂದ ಬಂತು ಎಂದು ಕೇಳುತ್ತಾರೆ. ಆದುದರಿಂದ ನನಗೆ ಅವೆಲ್ಲವೂ ಬೇಡ, ದಯವಿಟ್ಟು ನನಗೆ ಆ ರೀತಿಯಲ್ಲಿ ಮುಜುಗರ ಉಂಟುಮಾಡಬೇಡ ಎಂದ. ಅದಕ್ಕೆ ತಕ್ಷಣ ಈತನ ಎಳೆಯ ವಿ, ಆ ರೀತಿ ಎಲ್ಲಾ ಆಗುವುದಿಲ್ಲ, ನೀನು ನನ್ನ ಸ್ನೇಹಿತನಾಗಿದ್ದೀಯ, ನಿನಗೆ ಯಾವ ರೀತಿಯಲ್ಲಿಯೂ ಕೂಡ ಅವಮಾನ ಆಗುವ ಹಾಗೆ ನಾನು ನಡೆದುಕೊಳ್ಳುವುದಿಲ್ಲ, ಈಗ ಮೊದಲು ನನ್ನ ಜೊತೆಗೆ ಬಾ ಹೋಗೋಣವೆಂದು ಹೇಳಿ ಅವನಿಗೆ ಪೈಜಾಮ, ಶರ್ಟ್ ಶೆರ್ವಾನಿ, ಚಪ್ಪಲಿ, ಎವೆಲ್ಲವನ್ನೂ ಹಾಕಿಸಿಕೊಂಡು ಅವನನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಹೋದ. ಮೊದಲನೆಯದಾಗಿಯೇ ಊರಿನಲ್ಲಿ ಡೆಪ್ಯೂಟಿ ಸ್ಪೀಕರ್ ಮನೆ ಸಿಕ್ಕಿತ್ತು. ಮೊದಲು ಅವರಿಗೆ ಇನ್‌ವಿಟೇಶನ್ ಕೊಡುವುದಕ್ಕೆ ಅವರ ಮನೆ ಕರೆದುಕೊಂಡು ಹೋದ. ಇವರಿಬ್ಬರೂ ಬಂದಿದ್ದಾರೆ ಎಂದು ತಿಳಿದ ಕೂಡಲೇ ಇವರಿಬ್ಬರನ್ನೂ ಅವರ ಮನೆಯವರೆಲ್ಲರೂ ನೋಡುತ್ತಿದ್ದರು. ಯಾವ ಫ್ರೆಂಡ್ ಊರಿನಲ್ಲಿಯೇ ಇದ್ದು ಬಡವನಾಗಿದ್ದನೋ ಅವನು ಹಾಕಿಕೊಂಡಿದ್ದ ಹೊಸ ಶೆರ್ವಾನಿ, ಹೊಸ ಟೋಪಿ, ಹೊಸ ಚಪ್ಪಲಿಗಳನ್ನು ಹಾಕಿಕೊಂಡಿರುವುದನ್ನು ಆ ಮನೆಯವರು ನೊಡಿ ಅವನನ್ನು ಕೆಳಗಿನಿಂದ ಮೇಲಿನವರೆಗೂ ನೊಡಿದರು. ಈ ರೀತಿಯಲ್ಲಿ ಕೆಳಗಿನಿಂದ ಮೇಲಿನವರೆವಿಗೂ ಅವರು ನೋಡುವುದಕ್ಕೆ ಪ್ರಾರಂಭ ಮಾಡಿದ ಮೇಲೆ ಟೋಪಿಯನ್ನು ಬಹಳ ಹೊತ್ತು ನೋಡಿದರು. ಆ ರೀತಿಯಲ್ಲಿ ನೋಡುತ್ತಿರುವುದನ್ನು ದುಬೈನಿಂದ ಬಂದಿದ್ದ ಈತನ ಗೆಳೆಯ ಮಾತನಾಡಿ ಈ ಟೋಪಿ ನನ್ನದೇ, ಅವನ ಹತ್ತಿರ ಇದು ಇರಲಿಲ್ಲ, ಆದುದರಿಂದ ಈ ಟೋಪಿಯನ್ನು ಹಾಕಿಕೊಂಡು ಬಾ ಎಂದು ಹೇಳಿ ಅವನಿಗೆ ಟೋಪಿ ಹಾಕಿಸಿಕೊಂಡು ಅವನನ್ನು ಕರೆದುಕೊಂಡು ಬಂದಿದ್ದೇನೆಂದು ಅವರಿಗೆ ಹೇಳಿದ.

ಇವರ ಮನೆಗೆ ಬರುವ ಮೊದಲೇ ನಿನಗೆ ಅವಮಾನ ಮಾಡುವುದಿಲ್ಲ, ನಿನ್ನನ್ನು ಸುರಕ್ಷಿತವಾಗಿ ಕರೆದುಕೊಂಡು ಹೋಗುತ್ತೇನೆ, ಎಷ್ಟೇ ಆದರೂ ನಾನು ನೀನು ಒಳ್ಳೆಯ ಗೆಳೆಯರು ಎಂದೆಲ್ಲಾ ಹೇಳಿಬಿಟ್ಟು ಈ ಮನೆಗೆ ಬಂದಕೂಡಲೇ ಈ ಟೋಪಿ ನನ್ನದು ಎಂದುಬಿಟ್ಟನಲ್ಲಾ ಎಂದು ಬೇಜಾರು ಆಡಿಕೊಂಡು ಹೊರಗಡೆ ಬಂದ ತಕ್ಷಣ ನೋಡಪ್ಪಾ, ನಿನ್ನ ಜೊತೆ ಬರುವುದೂ ಬೇಡಾ, ಈ ರೀತಿಯಲ್ಲಿ ಅವಮಾನವಾಗುವುದೂ ನನಗೆ ಬೇಡವೆಂದು ಅವನಿಗೆ ಹೇಳಿ ಅವನ ಜೊತೆಯಲ್ಲಿ ಹೋಗುವುದಕ್ಕೆ ಒಪ್ಪಲಿಲ್ಲ. ತಕ್ಷಣ ಈತನ ಗೆಳೆಯ ಏನು ಹೇಳಿದನೆಂದರೆ, ಇಲ್ಲ, ಇಲ್ಲಾಪ್ಪಾ, ಆ ರೀತಿಯಾಗದಂತೆ ನಾನು ಎಚ್ಚರ ವಹಿಸುತ್ತೇನೆ ಇನ್ನು ಕೇವಲ ಮೂರ್ನಾಲ್ಕು ಕಾರ್ಡ್‌ಗಳಿವೆ, ನನು ಇನ್ನು ಮುಂದೆ ನಿನ್ನ ಬಗ್ಗೆ ಯಾರ ಮನೆಗೆ ಹೋದರೂ ಎನ್ನನ್ನೂ ಹೇಳುವುದಿಲ್ಲ, ದಯವಿಟ್ಟು ಬಾ ಎಂದು ಹೇಳಿ ಅವನನ್ನು ಕರೆದುಕೊಂಡು ಎರಡನೆಯ ಮನೆಗೆ ಹೋದ. ಎರಡನೆಯ ಮನೆಯಲ್ಲಿ ನಮ್ಮ ಪಿ.ಡಬ್ಲ್ಯೂ.ಡಿ. ಮಂತ್ರಿಯವರಿಗೆ ಇನ್‌ವಿಟೇಶನ್ ಕಾರ್ಡ್ ಕೊಟ್ಟ, ಎನ್‌ವಿಟೇಶನ್ ಕಾರ್ಡ್ ತೆಗೆದುಕೊಂಡು ಪಿ.ಡಬ್ಲ್ಯೂ.ಡಿ ಮಂತ್ರಿಗಳು ಹೊಸ ಬಟ್ಟೆ ಹಾಕಿಕೊಂಡವನನ್ನು ಕೆಳಗಿನಿಂದ ಮೇಲಕ್ಕೆ ನೋಡುವುದಕ್ಕೆ ಪ್ರಾರಂಭ ಮಾಡಿದರು. ಏಕೆಂದರೆ ಊರಿನಲ್ಲಿ ಆತ ಇಂಥ ಹೊಸ ಬಟ್ಟೆಗಳನ್ನು ಹಾಕಿಕೊಂಡು ಯಾವತ್ತೂ ತಿರುಗಿರಲಿಲ್ಲ. ಶೆರ್ವಾನಿಯನ್ನು ಸಚಿವರು ಬಹಳ ಹೊತ್ತ ನೋಡಿದ ಮೇಲೆ ಇವನನ್ನು ಕರೆದುಕೊಂಡು ಬಂದವನು ಸುಮ್ಮನೇ ಇರಬೇಕು ತಾನೆ. ಆದರೆ ಅವನು ಸುಮ್ಮನಿರಲಿಲ್ಲ. ಸಚಿವರು ತನ್ನ ಗೆಳೆಯನ ಶೆರ್ವಾನಿಯನ್ನು ನೋಡುತ್ತಿರುವುದನ್ನು ಗಮನಿಸಿ, ನನ್ನ ಗೆಳೆಯ ಹಾಕಿಕೊಂಡಿರುವ ಶೇರ್ವಾನಿ ನನ್ನದೇ, ಪಾಪ ಇವನ ಹತ್ತಿರ ಬಟ್ಟೆ ಇಲ್ಲವೆಂದು ತಿಳಿದು ನಾನೇ ಇವನಿಗೆ ಶೆರ್ವಾನಿ ಕೊಟ್ಟು ಹಾಕಿಕೊಮಡು ಬಾ ಎಂದು ಹೇಳಿದ್ದೆ. ಅವನು ಹಾಕಿಕೊಂಡಿರುವ ಶೆರ್ವಾನಿ ನನ್ನದೇ ಎಂದು ಸಚಿವರಿಗೆ ಹೇಳಿಬಿಟ್ಟ, ತಕ್ಷನ ಈತನ ಗೆಳೆಯನ ಮನಸ್ಸಿಗೆ ಬೇಜಾರಾಗಿ, ಎಂಥವನ್ನಪ್ಪಾ ಇವನು, ಸಹಾಯ ಮಾಡು ಎಂದು ನನಗೆ ಹೇಳಿ ನನ್ನನ್ನು ಕರೆದುಕೊಂಡು ಬಂದು ಈಗ ಇಲ್ಲಿ ಈ ಶೆರ್ವಾನಿ ನನ್ನದೇ ಎಂದು ಹೇಳಿಕೊಂಡು ನನಗೆ ಅವಮಾನು ಮಾಡುತ್ತಿದ್ದಾನಲ್ಲಾ ಎಂದು ಬೇಜಾರು ಮಾಡಿಕೊಂಡ. ಕಡೆಗೆ ಹೊರಗೆ ಬಂದು ನೋಡಪ್ಪಾ ನಿನ್ನ ಜೊತೆ ಬರುವುದು ಸಾಕಪ್ಪಾ, ನಿನ್ನ ಸಂಗಡ ಬರುವುದು ಬೇಡಾ, ನನಗೆ ಅವಮಾನ ಆಗುವುದೂ ಬೇಡಾ, ನೀನು ಈಗ ಹೋಗು, ನಿನ್ನ ತಂಗಿಯ ಲಗ್ನವನ್ನಾದರೂ ಮಾಡು, ಏನಾದರೂ ಮಾಡು, ನೀನು ಯಾರಿಗೆ ಬೇಕಾದರೂ ಇನ್‌ವಿಟೇಶನ್ ಕೊಡು ಎಂದು ಹೇಳಿದ. ತಕ್ಷಣ ಈತನ ಗೆಳಯ, ನೋಡಪ್ಪಾ ಈ ಊರಿನಲ್ಲಿ ನನಗೆ ಯಾರು ಗೊತ್ತಿಲ್ಲ, ನಾನು ಸಚಿವರ ಮನೆಯಲ್ಲಿ ಆ ರೀತಿ ಹೇಳಿದಕ್ಕೆ ತಪ್ಪಾಯಿತು, ನೀನು ನನ್ನ ಜೊತೆ ಬಾ, ಇನ್ನು ಮೇಲೆ ನಾನು ಮಾತನಾಡುವುದೇ ಇಲ್ಲಾ, ನೀನು ನನಗೆ ಈಗ ಕ್ಷಮಿಸು ಎಂದು ಹೇಳಿ ಕೈಜೋಡಿಸುತ್ತೇನೆ, ಕಾಲು ಹಿಡಿಯುತ್ತೇನೆ

ಎಂದೆಲ್ಲಾ ಹೇಳಿ ಮತ್ತೆ ಆತನನ್ನು ತನ್ನ ಜೊತೆ ಕರೆದುಕೊಂಡು ಹೋದ. ಹೀಗೆ ಹೇಳಿ ಅವನನ್ನೂ ಕರೆದುಕೊಂಡು ಮೂರನೆಯ ಮನೆಗೆ ಹೋದ. ಅದು ಮಾನ್ಯ ಸಚಿವರಾದ ಕಾರ್‌ಜೋಳ್‌ರವರ ಮನೆ. ಅವರ ಮನೆಗೆ ಹೋಗಿ ಕುಳಿತುಕೊಂಡು ತದನಂತರ ಅವರಿಗೆ ಇನ್‌ವಿಟೇಶ್‌ನ್‌ನ್ನು ಕೊಟ್ಟರು. ಆಮೇಲೆ ಟೀ ಕುಡಿದರು. ಆಮೇಲೆ ಸಚಿವರ ಮನೆಯವರೆಲ್ಲರೂ ಹೊಸ ಬಟ್ಟೆ ಹಾಕಿಕೊಂಡಿ ಬಂದಿದ್ದವನನ್ನು ನೋಡಿದರು. ಹೀಗೆ ಆತನನ್ನು ಮೇಲಿಂದ ಕೆಳಗಿನವರೆಗೆ ನೋಡುತ್ತಿದ್ದರು, ಕೆಳಗೇ ಬಿದ್ದಿದ್ದ ಲಾಡಿ ನೋಡಿದರು. ಇವನು ಸುಮ್ಮನೇ ಇರಬೇಕು ತಾನೆ, ಅವನು ಸುಮ್ಮನೇ ಇರದೇ, ಓ ನೀವು ನನ್ನ ಗೆಳಯ ಹಾಕಿಕೊಂಡಿರುವ ಪೈಜಾಮದ ಲಾಡಿ ಕಡೆ ನೋಡುತ್ತಿದ್ದೀರಿ, ನಾನೇ ಅವನಿಗೆ ಆ ಪೈಜಾಮವನ್ನು ದುಬೈನಿಂದ ತಂದುಕೊಟ್ಟಿದ್ದೇನೆ, ಪಾಪ, ಅವನಿಗೆ ಹಾಕಿಕೊಳ್ಳಲು ಪೈಜಾಮ ಕೂಡ ಇರಲಿಲ್ಲ, ಅದಕ್ಕೋಸ್ಕರ ಅವನಿಗೆ ಪೈಜಾಮವನ್ನು ತಂದುಕೊಟ್ಟೆ ಎಂದು ಹೇಳಿದ. ಈತನ ಗೆಳೆಯನಿಗೆ ಇದರಿಂದ ಮತ್ತೂ ಬೇಜಾರಾಯಿತು, ಅವಮಾನವಾಯಿತು. ಮೊದಲನೆಯ ಮನೆಯಲ್ಲಿ ಟೋಪಿ ಬಗ್ಗೆ ಹೇಳಿದ, ಇನ್ನೊಂದು ಮನೆಗೆ ಹೋದರೆ ಶೆರ್ವಾನಿ ಬಗ್ಗೆ ಹೇಳಿದ, ಇಲ್ಲಿಗೆ ಬಂದಮೇಲೆ ಪೈಜಾಮವೂ ನನ್ನದೇ ಎಂದು ಹೇಳಿಬಿಟ್ಟನಲ್ಲಾ. ಇದರಿಂದ ಎಷ್ಟು ಅವಮಾನವಾಯಿತು ನನಗೆ ಎಂದು ನೊಂದುಕೊಂಡು ಬಹಳ ಬೇಸರದಿಂದ ಎದ್ದು ಹೊರಗಡೆ ಬಂದ. ಅವನು ಹೊರಗಡೆ ಬಂದ ಕೂಡಲೇ ಈತನ ಗೆಳೆಯ ಅವನ ಬೆನ್ನುಹತ್ತಿಕೊಂಡು ಬಂದು ತಪ್ಪಾಯಿತು, ನಿನ್ನ ದಮ್ಮಯ್ಯ, ಇನ್ನು ಮುಂದೆ ನಾನು ಏನೂ ಹೇಳುವುದಿಲ್ಲ, ದಯವಿಟ್ಟು ಮತ್ತೊಮ್ಮೆ ನನ್ನನ್ನು ಕ್ಷಮಿಸು. ನನ್ನ ತಂಗಿಯ ಲಗ್ನವಿದೆ. ನನಗೆ ಈ ಊರಿನಲ್ಲಿ ಯಾರೂ ಗೊತ್ತಿಲ್ಲ ಇನ್ನು ಒಂದು ಕಾರ್ಡ್ ಕೊಡುವುದು ಉಳಿದಿದೆ. ಅದನ್ನು ರೇವಣ್ಣನಿಗೆ ಕೊಟ್ಟು ಹೋಗಿಬಿಡೋಣವೆಂದು ಹೇಳಿ ಅವನನ್ನು ಒಪ್ಪಿಸಿ ಕರೆದುಕೊಂಡು ಹೋದ. ಇಬ್ಬರೂ ಕೂಡ ರೇವಣ್ಣನ ಮನೆಗೆ ಹೋದರು ಅಲ್ಲಿ ಅವರ ಮನೆಯವರೆಲ್ಲರೂ ಕುಳಿತಿದ್ದರು. ರೇವಣ್ಣನವರು ಟೀ, ಬಿಸ್ಕತ್ತು ತರಿಸಿಕೊಟ್ಟರು. ಇವರೂ ಕುಡಿದರು, ರೇವಣ್ಣನವರಿಗೆ ಇನ್‌ವಿಟೇಶನ್ ಕಾರ್ಡ್ ಕೊಟ್ಟರು. ಇನ್‌ವಿಟೇಶನ್ ಕಾರ್ಡ್ ತೆಗೆದುಕೊಂಡು ರೇವಣ್ಣನವರು ಹೊಸ ಬಟ್ಟೆ ಹಾಕಿದ್ದವನನ್ನು ಕೆಳಗಿನಿಂದ ಮೇಲಿನವರೆವಿಗೂ ನೋಡಿ ಚಪ್ಪಲಿ ತುಂಬ ಹೊಸದಾಗಿದೆ, ಬೇರೆ ದೇಶದಿಂದ ತಂದಿರಬಹುದೇನೋ ಎಂದು ಅದನ್ನೇ ಬಹಳ ಹೊತ್ತು ನೋಡುತ್ತಿದ್ದರು. ಈ ರೀತಿ ಅವರು ನೋಡುತ್ತಿರುವುದನ್ನು ನೊಡಿ ಸುಮ್ಮನೇ ಕೂರುವುದಕ್ಕೆ ದುಬೈ ಗೆಳೆಯನಿಗೆ ಆಗಲಿಲ್ಲ. ಈ ಹೊಸ ಚಪ್ಪಲಿಗಳ ಕ್ರೆಡಿಟ್ ಎಲ್ಲಿ ಗೆಳಯನಿಗೆ ಹೋಗಿಬಿಡುತ್ತದೋ ಎಂದು ತಿಳಿದು ತಕ್ಷಣ ಹೇಳಿದ. ಅವನು ಹಾಕಿಕೊಂಡಿರುವ ಚಪ್ಪಲಿಯನ್ನು ದುಬೈನಿಂದ ನಾನೇ ಅವನಿಗೆ ತಂದುಕೊಟ್ಟಿದ್ದು. ಅದು ನನ್ನದೇ ಎಂದು ಹೇಳಿದ. ಈ ರೀತಿಯಲ್ಲಿ ತನ್ನ ಗೆಳೆಯ ಹೇಳಿದ ಕೂಡಲೇ ಚಪ್ಪಲಿ ಹಾಕಿಕೊಂಡಿದ್ದವನಿಗೆ ತಕ್ಷಣ ಸಿಟ್ಟು ಬಂತು. ಇದೇನಿದು

ನಾನು ಇವನಿಗೆ ಸಹಾಯ ಮಾಡುವುದಕ್ಕೆ ಇವನ ಜೊತೆಯಲ್ಲಿ ಮನೆ ಮನೆಗೆ ಹೋಗಿ ಇನ್‌ವಿಟೇಶನ್ ಕಾರ್ಡ್‌ಗಳನ್ನು ಹಂಚಿದ್ದೇನೆ. ಅವನು ತನ್ನ ತಂಗಿಯ ಲಗ್ನವಿದೆಯೆಂದು ಹೇಳಿದ್ದಾನೆ. ನಾನು ಕೂಡ ಅವನ ಜೊತೆ ಮನೆ ಮನೆಗೆ ಹೋಗಿ ಹೇಳಿಕೊಂಡು ಬಂದಿದ್ದೇನೆ. ಆದರೆ ಇವನು ನನಗೆ ಹೋದಲೆಲ್ಲಾ ಟೋಪಿ ನನ್ನದು, ಶೆರ್ವಾನಿ ನನ್ನದು, ಪೈಜಾಮ ನನ್ನದು, ಚಪ್ಪಲಿ ನನ್ನದು ಎಂದು ಹೇಳುತ್ತಿದ್ದಾನಲ್ಲಾ, ಏನು ಇವನು ಈ ರೀತಿಯಾಗಿ ನನಗೆ ಅವಮಾನ ಮಾಡುತ್ತಿದ್ದಾನಲ್ಲಾ ಎಂದು ಬೇಸರ ಪಟ್ಟುಕೊಂಡು ಹೊರಗಡೆ ಬಂದ. ನೋಡಪ್ಪ, ನೀನು ಬಹಳ ದೊಡ್ಡ ಮನುಷ್ಯ ಇದ್ದೀಯಾ, ಬಹಳ ಶ್ರೀಮಂತನಿರಬಹುದು, ಅಗರ್ಭ ಶ್ರೀಮಂತನಾಗಿರಬಹುದು, ಆದರೆ ನಿನ್ನ ಸಹವಾಸ ನನಗೆ ಬೇಡ, ನಿನ್ನಿಂದ ನನಗೆ ಅವಮಾನ ಬೇಡ ಎಂದು ಹೇಳಿ ಅವನೇನು ಮಾಡಿದ ಎಂದರೆ, ಈಗ ನಿನ್ನ ಶೆರ್ವಾನಿ ತೆಗೆದುಕೋ, ನಿನ್ನ ಟೋಪಿ ತೆಗೆದುಕೊ, ನಿನ್ನ ಪೈಜಾಮ ತೆಗೆದುಕೊ, ಏನು ನನ್ನ ಚೆಡ್ಡಿ, ಬನಿಯನ್ ಇದೆ ಅದರಲ್ಲೇ ನಾನು ಮನೆಗೆ ಹೋಗುತ್ತೇನೆ ಎಂದು ಹೇಳುತ್ತಾನೆ. ಹಾಗೆ ಮುಖ್ಯಮಂತ್ರಿಗಳು ಏನು ಮಾಡಲು ಹೊರಟಿದ್ದಾರೆ ಎಂದರೆ, ಒಬ್ಬೊಬ್ಬರಿಗೆ ಒಂದೊಂದು ಕೊಟ್ಟು, ಬಹಳಷ್ಟು ಮಠಾಧೀಶರಿಗೆ, ಎಲ್ಲಾ ದೊಡ್ಡವರಿಗೆ ಕೈಜೋಡಿಸಿ ಈ ಸದನದ ಮೂಲಕ ನಾನು ಕೇಳುಕೊಳ್ಳುತ್ತೇನೆ, ನಾಳೆ ಯಡಿಯೂರಪ್ಪನವರು ಹೋಗಿ ಈ ದೇಗುಲ ನನ್ನದು, ಈ ಬಾಗಿಲು ನನ್ನದು, ಈ ಗುಡಿ ನನ್ನದು, ಈ ಕಳಸ ನನ್ನದು ಎಂದು ಹೇಳಿದರೆ ಬಹಳ ದೊಡ್ಡ ಅವಮಾನವಾಗುತ್ತದೆ. ಅದಕ್ಕಾಗಿ ಬೆಟ್ಟು ಮಾಡಿ ಮಾಡಿ ಕೊಡುವುದಕ್ಕೆ ಹೋಗಬೇಡಿ, ಶೆರ್ವಾನಿ, ಪೈಜಾಮದ ಕತೆಯಾದಂತಾಗುತ್ತದೆ, ಪಾಪ ಅವರಿಗೆ ಅವಮಾನವೂ ಕೊಡ ಆಗುತ್ತದೆ. ಕೊಡುವುದನ್ನು ಕೊಟ್ಟು ಧಾರಳವಾಗಿ ಕೊಟ್ಟಿದ್ದೇನೆಂದು ಹೇಳಿ. ನಾನು ಭೌದ್ಧ ಧರ್ಮಕ್ಕೆ ಕೊಟ್ಟೆ, ನಾನು ಕನಕದಾಸರಿಗೆ ಕೊಟ್ಟೆ, ನಾನು ಛಲವಾದಿಗೆ ಕೊಟ್ಟೆ, ನಾನು ಲಂಬಾಣಿಗೆ ಕೊಟ್ಟೆ, ಹೀಗೆ ಹೇಳಿಕೊಟ್ಟರೆ, ಅದು ಅವಮಾನವೇ ಹೊರತು, ಅದು ಕ್ರೆಡಿಟ್ ಅಲ್ಲ. ಯಾವಾಗಲೂ ಕೊಡುವವರು ನ್ಯಾಯವಾಗಿ ಕೊಡಬೇಕು, ಇಲ್ಲವೆಂದರೆ ಅದರ ಗೋಜಿಗೆ ಹೋಗಬಾರದು. ಅದೇ ರೀತಿಯಾಗಿ ಇವತ್ತು ಉದಾಸಿಯವರು, ಕೊಡುತ್ತೇನೆ, ಕೊಡುತ್ತೇನೆಂದು ಹೇಳಿ ಅವರು ಕೂಡ ಎಲ್ಲಿಗೆ ಬಂದಿದ್ದಾರೆಂದರೆ, ನಿಮ್ಮ ಹಾಗೆ, ಇದು ನಮ್ಮದು ಇದು ನಿಮ್ಮದು, ಅವರಿಬ್ಬರ ಮಧ್ಯದಲ್ಲೇ ನಡೆಯುತ್ತದೆ. ಇಲ್ಲಿಯವರೆಗೆ ನಡೆದ ಘಟನೆಯನ್ನು ನೋಡಿದರೆ, ಉಪರ್ ಶೆರ್ವಾನಿ ಅಂದರೆ ಪರಿಶಾನಿ ಹಾಗೆ ಆಗಿದೆ ಎಂದು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ:ಬಿ.ಎಸ್.ಯಡಿಯೂರಪ್ಪ: ರೇವಣ್ಣ ಇವರ ಮಾತನ್ನು ಕೇಳಬೇಡಿ, ಅವರು ನಮಗೂ ನಿಮಗೂ ತಂದಿಡುತ್ತಾರೆ, ಮೇ ತಿಂಗಳಲ್ಲಿ ಮಾಡಿಕೊಡುತ್ತೇವೆಂದು ಮಂತ್ರಿಗಳು ಹೇಳಿದ್ದಾರೆ, ದಯವಿಟ್ಟು ಸಹಕರಿಸಿ, ನಿಮ್ಮ

ಕೆಲಸವನ್ನು ನಾವು ಮಾಡಿಕೊಡುತ್ತೇವೆ, ನಿಮ್ಮ ಸ್ಥಾನಕ್ಕೆ ತೆರಳಿ, don't worry ಖರ್ಗೆಯವರು ನಿಮಗೆ ಉಪಯೋಗ ಮಾಡುತ್ತಾರೆಂದು ನೀವು ಬಾವಿಯಲ್ಲಿ ನಿಂತುಕೊಂಡರೆ ಅದರಿಂದ ಉಪಯೋಗವಾಗುವುದಿಲ್ಲ, ಕೊನೆಯ ದಿವಸ ಚೆನ್ನಾಗಿರುವುದಿಲ್ಲ, ಉದಾಸಿಯವರೆ ಭರವಸೆಯನ್ನು ಕೊಟ್ಟಿದ್ದಾರೆ, ಅದನ್ನು ನಾನು ಸರಿಪಡಿಸುತ್ತೇನೆ ಬನ್ನಿ.

ಶ್ರೀ ಎಂ.ಮಲ್ಲಿಕಾರ್ಜುನ ಎಂ ಖರ್ಗೆ: ಉದಾಸಿಯವರೇನೋ ಭರವಸೆಯನ್ನು ಕೊಟ್ಟಿದ್ದಾರೆ, ಆದರೆ ಮುಖ್ಯಮಂತ್ರಿಗಳು ಇರುತ್ತಿದ್ದರೆಂದರೆ, ಪ್ರತಿಯೊಂದಕ್ಕು ಟೋಪಿ ಕತೆಯನ್ನು ಏನು ಇದು ನಂದು ಇದು ನಂದು ಎಂದು ನಾನು ಹೇಳಿದ್ದೇನಲ್ಲ ಹಾಗೆ ಹೇಳುತ್ತಿದ್ದರು. ಅದೇ ರೀತಿಯಾಗಿ ಇವತ್ತಲ್ಲ ನಾಳೆ ಮಠ ಮಾನ್ಯಗಳಿಗೆ ಇದು ಬಂದೇ ಬರುತ್ತದೆ, ಖಂಡಿತವಾಗಿಯೂ ಎಲ್ಲಿಯಾದರೂ ಒಂದು ಕಡೆ ಹೇಳುತ್ತಾರೆ. ಅದಕ್ಕಾಗಿ, ನಾನು ಆ ಗೋಜಿಗೆ ಹೋಗುವುದಿಲ್ಲ, ಅದು ಅವರಿಗೆ ಬಿಟ್ಟಿದ್ದು. ಆದರೆ ರೇವಣ್ಣನವರೆ, ನಾನು ಅಪೀಲ್ ಮಾಡುತ್ತೇನೆ, ಇವತ್ತು ಉದಾಸಿಯವರು ಮಾತನ್ನು ಕೊಟ್ಟಿದ್ದಾರೆ. ಮಾತಿಗೆ ತಕ್ಕಂತೆ ನಡೆದುಕೊಳ್ಳುತ್ತಾರೆಂದು ನಾವು ನಂಬೋಣ. ಮತ್ತೆ ಇದನ್ನು ಮಾಡಿದ್ದು ಸರ್ವಥಾ ತಪ್ಪು, ಅ ತಪ್ಪನ್ನು ಅವರು ಒಪ್ಪಿಕೊಂಡಿದ್ದಾರೆ, ಸರಿಪಡಿಸುತ್ತೇನೆಂದು ಹೇಳಿದ್ದಾರೆ ಅದಕ್ಕಾಗಿ ತಾವು ಕೂಡ ತಮ್ಮ ಸ್ಥಾನಕ್ಕೆ ಬನ್ನಿ, ಬಂದು ತಮ್ಮ ವಿಚಾರಗಳನ್ನು ಹೇಳಿ, ನಾವು ನಿಮ್ಮ ಜೊತೆಯಲ್ಲೇ ಇದ್ದೇವೆ. ಏಕೆಂದರೆ, ಈ issue ನಿಜವಾಗಲೂ ಸಾರ್ವಜನಿಕರಿಗೆ ಸಂಬಂಧಪಟ್ಟಿದ್ದು. [ಈ ಸಂದರ್ಭದಲ್ಲಿ ಬಾವಿಯಲ್ಲಿದ್ದ ಜೆಡಿಎಸ್ ಸದಸ್ಯರು ತಮ್ಮ ಸ್ಥಾನಕ್ಕೆ ತೆರಳಿದರು] ಮೊದಲನೆ ಸಲ ರೇವಣ್ಣನವರ ಒಂದು ರೋಡ್ ಅವರಿಗೆ ಸಂಬಂಧಪಟ್ಟಿದ್ದರೆ ಬೇರೆಯವರಿಗೆ ಸಂಬಂಧಪಟ್ಟ ರೋಡ್‌ಗಳೇ ಹೆಚ್ಚಿಗೆ ಇವೆ, ಇದರಲಲಿ ಅವರಿಗೆ ಇರುವುದು ಒಂದೇ ಒಂದು ರೋಡ್. ಅದಕ್ಕಾಗಿ ಅವರ ಮೊದಲನೇ ಸಲ ನಮ್ಮನ್ನೆಲ್ಲಾ ತಮ್ಮ ತೆಕ್ಕೆಯಲ್ಲಿ ತೆಗೆದುಕೊಂಡು ಹೋಗುತ್ತಿದ್ದಾರೆ, ದಯವಿಟ್ಟು ತಾವೆಲ್ಲರೂ ಕೂಡ ಸಹಕರಿಸಬೇಕು. ಮತ್ತೆ ಉದಾಸಿಯವರು ಹೇಳಿದಂತೆ ನಡೆಯಬೇಕೆಂದು ನಾನು ಸ್ಪಷ್ಟವಾಗಿ ಇವತ್ತು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ, ದಯವಿಟ್ಟು ತಾವು ಈ ಮಾತನ್ನು ಹೇಳಬೇಕು.

ಶ್ರೀ ಅರವಿಂದ ಲಿಂಬಾವಳಿ[ಉನ್ನತ ಶಿಕ್ಷಣ ಸಚಿವರು]: ಮಾನ್ಯ ಖರ್ಗೆಯವರು ಮುಖ್ಯಮಂತ್ರಿಗಳ ಬಗ್ಗೆ ಹೇಳಿದರು, ಖರ್ಗೆ ಸಾಹೇಬರೆ, ಬಹಳ ದಿವಸ ದೆಹಲಿಗೆ ಹೋಗುವುದಕ್ಕೆ ಹೋಗಬೇಡಿ, ಆಮೇಲೆ ನಿಮ್ಮನ್ನು ಗುರುತು ಹಿಡಿಯುವುದಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಬದಲಾವಣೆ ಮಾಡಿರುವ ರಸ್ತೆಗಳೆಲ್ಲಾ ಅ ಭಾಗದ ವಿರೋಧ ಪಕ್ಷದ ಶಾಸಕರಿಗೆ ಸೇರಿದ ರಸ್ತೆಗಳನ್ನು ಬದಲಾವಣೆ ಮಾಡಿದ್ದಾರೆ, ಆಡಳಿತ ಪಕ್ಷಕ್ಕೆ ಸೇರಿದ ಒಂದೂ ರಸ್ತೆಗಳನ್ನು ಕೂಡ ಬದಲಾವಣೆ ಮಾಡಿಲ್ಲ. ಅದರ ಉದ್ದೇಶವನ್ನು ಕೇಳಿದರೆ, ಅಲ್ಲಿ

ಲ್ಯಾಂಡ್ ಅಕ್ವಿಸಿಷನ್ ಪ್ರಾಬ್ಲಂ ಎಂದು ಹೇಳುತ್ತಾರೆ. ನಿಜವಾಗಲೂ ಕೂಡ ಲ್ಯಾಂಡ್ ಅಕ್ವಿಸಿಷನ್ ಪ್ರಾಬ್ಲಂ ಇದ್ದರೆ ಅದಕ್ಕೆ ನಾವು ತಲೆಬಾಗಿ ವಾಪಸ್ ಬರುತ್ತೇವೆ, ಅದನ್ನು ಉದಾಸಿಯವರು ಹೇಳಬೇಕು. ಇದು ವಿಶ್ವಬ್ಯಾಂಕಿನಿಂದ ಮಂಜೂರಾಗಿರುವ ಯೋಜನೆ, ಅದನ್ನು ಕ್ಯಾಬಿನೆಟ್ ನಲ್ಲಿ ತಂದು ಬದಲಾವಣೆ ಮಾಡಬೇಕು, ಅದನ್ನು ಕೂಡ ಮಾಡಿಲ್ಲ. ನಮ್ಮ ಮೇಲೆ ದ್ವೇಷದ ರಾಜಕಾರಣ ಮಾಡುವುದನ್ನು ಸನ್ಮಾನ್ಯ ಸಚಿವರು ಬಿಡಬೇಕೆಂದು, ಹೇಳಿ ಇದನ್ನು ಖಂಡಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.[ಜೆಡಿಎಸ್ ಸದಸ್ಯರು ಸಭಾತ್ಯಾಗ ಮಾಡಿದರು]

ಪ್ರಕಟಣೆ

ವಿಷಯ: ವಿಧಾನ ಪರಿಷತ್ತು, 2009ನೇ ಸಾಲಿನ ವಿಧೇಯಕಗಳನ್ನು ದಿ:27-02-2009 ರಂದು ಯಾವುದೇ ತಿದ್ದುಪಡಿಗಳಿಲ್ಲದೇ ಸಹಮತಿ ನೀಡಿರುವ ಬಗ್ಗೆ.

ಉಪಾಧ್ಯಕ್ಷರು: ಈಗ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದ ಸಂದೇಶವಿದೆ. ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಮದಿರುವ ಸಂದೇಶದಲ್ಲಿ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2009ನೇ ಸಾಲಿನ ಈ ಕೆಳಕಂಡ ವಿಧೇಯಕಗಳನ್ನು ದಿನಾಂಕ: 27.2.2009ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿರುತ್ತಾರೆಂದು ತಿಳಿಸಿರುತ್ತಾರೆ.

1. ಕರ್ನಾಟಕ ಧನ ವಿನಿಯೋಗ ವಿಧೇಯಕ, 2009,
2. ಕರ್ನಾಟಕ ಮೌಲ್ಯವರ್ಧಿತ ತೆರಿಗೆ ತಿದ್ದುಪಡಿ ವಿಧೇಯಕ, 2009,
3. ಕರ್ನಾಟಕ ತೆರಿಗೆ ಕಾನೂನುಗಳ ತಿದ್ದುಪಡಿ ವಿಧೇಯಕ, 2009
4. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ತಿದ್ದುಪಡಿ ವಿಧೇಯಕ, 2009,
5. ಕರ್ನಾಟಕ ಆರ್ಥಿಕ ಹೊಣೆಗಾರಿಕೆ ತಿದ್ದುಪಡಿ ವಿಧೇಯಕ, 2009,
6. ಕರ್ನಾಟಕ ಸ್ಟ್ಯಾಂಪ್ ತಿದ್ದುಪಡಿ ವಿಧೇಯಕ, 2009 ಮತ್ತು
7. ಕರ್ನಾಟಕ ಧನವನಿಯೋಗ ಸಂಖ್ಯೆ:1 ವಿಧೇಯಕ 2009.

10. ಸಂಕ್ಷಿಪ್ತ ವರದಿ

ವಿಷಯ:- 13ನೇ ವಿಧಾನಸಭೆಯ ಎರಡನೇ ಅಧಿವೇಶನದ ಮುಂದುವರೆದ ಉಪವೇಶನಗಳ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ.

******

ಹದಿಮೂರನೇ ವಿಧಾನಸಭೆಯ ಎರಡನೇ ಅಧಿವೇಶನದ ಮುಂದುವರೆದ ಉಪವೇಶನವು ದಿನಾಂಕ 19 ಫೆಬ್ರವರಿ, 2009 ರಿಂದ ದಿನಾಂಕ 27ನೇ ಫೆಬ್ರವರಿ,